Second Report of the Committee of Privileges—
(Presentation)

Sri S. V. NAIK (Kumta).—I beg to present the Second report of the Committee of Privileges.

MADAM SPEAKER.—The Report is presented.

Alleged assault and Police Excesses at the H. M. T.

Sri T. R. SHAMANNA (Fort).—I had given a notice about the assault and disturbance at H. M. T. which took place on Saturday, viz on 15-3-1975.

ಶ್ರೀ ಎಂ. ಎಸ್. ಕೃಷ್ಣನ್.—ಅದನ್ನು ನಾನೂ ಕೂಡ ಬರೆದು ಕಳುಹಿಸಿದ್ದೇನೆ.

ಅಧ್ಯಕ್ಷರು.—ಅದು ಬಂದಿದೆ, ಅದನ್ನು ನಾಳೆ ಸೇರಿಸುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಮೊನ್ನೆ ಈ ಘಟನೆ ಆದ ದಿವಸವೇ ನಾನು ಅದನ್ನು ಕೊಟ್ಟಿದ್ದೇನೆ. ಅಲ್ಲಿ ಪೋಲೀಸರ ವರ್ತನೆ ಸಿಕ್ಕಾಪಟ್ಟೆ ಆಗಿದೆ. ಇದು ಕೇಂದ್ರ ಸರ್ಕಾರದ ಸಂಸ್ಥೆ. ಒಂದು ದಿವಸ ಪ್ರೊಡಕ್ಷನ್ ಅಲ್ಲಿ ನಿಂತರೆ ಕೋಟ್ಯಾಂತರ ರೂಪಾಯಿ ನಷ್ಟ ಆಗುತ್ತದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಬರೆದು ಕಳುಹಿಸಿರುವುದು ಬಂದಿದೆ. ಅದನ್ನು ನಾಳೆ ಸೇರಿಸುತ್ತೇವೆ.

Affairs at Kanakapura

Sri B. B. SAYANAK.—Madam, I have given a notice for adjournment motion regarding Kanakapura matter.

MADAM SPEAKER.—Tomorrow, we are having the connected Demands, here and I suggest the Hon. members to speak about it tomorrow. It cannot be taken up as an adjournment motion.

Strike by the Students at Arsikere

ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಸ್ವಾಮಿ, ಅರಸೀಕೆರೆ ಟೌನ್‌ನಲ್ಲಿ ಈಗ್ಗೆ 8 ದಿವಸಗಳ ಹಿಂದೆ ಒಂದು ಮುದುಪೆ ಮನೆಯಲ್ಲಿ ಒಬ್ಬ ಉಪಾಧ್ಯಾಯರು ಶಾಲಾ ಮಕ್ಕಳಿಂದ ಕಳ್ಳತನವನ್ನು ಮಾಡಿಸಿದ್ದಾರೆ. ಈ ಬಗ್ಗೆ 3 ದಿವಸ ದಿಂದ ಅಲ್ಲಿನ ಹುಡುಗರು ಸ್ಟ್ರೈಕ್ ಮಾಡುತ್ತಿದ್ದಾರೆ. ಉಪಾಧ್ಯಾಯರು ಸುಖವಾಗಿ ತಿರುಗಾಡುತ್ತಿದ್ದಾರೆ.

ಅಧ್ಯಕ್ಷರು.—ಅದು ಏನು ಎಂಬುದನ್ನು ನೋಡೋಣ.

ಶ್ರೀ ಡಬ್ಲ್ಯೂ. ಡಿ. ದೇವೇಗೌಡ (ಹೊಳೇನರಸಿಪುರ).—ಈ ವಿಷಯ ಪತ್ರಿಕೆಯಲ್ಲೂ ಕೂಡ ಬಂದಿದೆ. ಒಬ್ಬ ಉಪಾಧ್ಯಾಯರು ಸುಮಾರು 50 ಸಾವಿರ ರೂಪಾಯಿಗಳಿಗೂ ಹೆಚ್ಚು ಬೆಲೆ ಬಾಳುವ ಆಭರಣ, ವಸ್ತ್ರ ಇತ್ಯಾದಿಗಳನ್ನು ಶಾಲಾ ಮಕ್ಕಳಿಂದ ಕಳ್ಳತನ ಮಾಡಿಸಿದ್ದಾರೆ. ಪೋಲೀಸ್‌ನವರು 350 ಜರತಾರಿ ಸೀರೆಗಳನ್ನು ಅಲ್ಲದೆ ಸುಮಾರು 20-25 ಸಾವಿರ ರೂಪಾಯಿ ಬೆಲೆ ಬಾಳುವ ಆಭರಣಗಳನ್ನು ಸೀಜ್ ಮಾಡಿದ್ದಾರೆ ಎಂದು. ಇದೆಲ್ಲಾ ಆದಮೇಲೂ ಕೂಡ ಆ ಉಪಾಧ್ಯಾಯರನ್ನು ಅರೆಸ್ಟ್ ಮಾಡಿಲ್ಲ. ಮಕ್ಕಳು ಈ ಕೆಲಸವನ್ನು ಮಾಡದಿದ್ದರೆ ಹೇರ್ ಮಾಡುತ್ತೇವೆ ಎಂದು ಹೆದರಿಸಿ ಆ ಮಕ್ಕಳಿಂದ ಕಳ್ಳತನವನ್ನು ಮಾಡಿಸಿದ್ದಾರೆ. ಉಪಾಧ್ಯಾಯರ